ಬಳ್ಳಾರಿ ನಗರಸಭೆಗೆ ಬಿಡುಗಡೆಯಾದ ಜಕಾತಿ ಮೊತ್ತ

೫೦೩ (೭೯೮) ಶ್ರೀ ಆರ್. ರಾಮಪ್ಪ (ಬಳ್ಳಾರಿ).—ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೮೮-೮೯ನೇ ಸಾಲಿನಲ್ಲಿ ಬಳ್ಳಾರಿ ನಗರಸಭೆಗೆ ಬಿಡುಗಡೆಯಾದ ಜಕಾತಿ ಅನುದಾನದ ಮೊತ್ತ.

ಆ) ೧೯೮೮-೮೯ನೇ ಸಾಲಿನಲ್ಲಿ ಬಳ್ಳಾರಿ ನಗರಸಭೆಗೆ ನಿಗದಿಗೊಳಿಸಲ್ಪಟ್ಟ ಜಕಾತಿ ಮೊತ್ತದಲ್ಲಿ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಗೆ ಬಿಡುಗಡೆ ಮಾಡಿರುವ ಹಣ ಮತ್ತು ಈ ಮೊತ್ತವನ್ನು ಯಾವ ಬಾಬ್ತಿಗಾಗಿ ಮಾಡಲಾಗಿದೆ ಎಂಬುದನ್ನು ತಿಳಿಸುವುದು.

ಶ್ರೀ ಆರ್. ವಿ. ದೇಶಪಾಂಡೆ (ನಗರಾಭಿವೃದ್ಧಿ ಸಚಿವರು).:—

ಅ) ೧೯೮೮-೮೯ನೇ ಸಾಲಿನಲ್ಲಿ ೧ ಮತ್ತು ೨ನೇ ಕಂತಿನ ಬಾಬತ್ತು ರೂ.೩೬.೫೦ ಲಕ್ಷಗಳನ್ನು ಇಲ್ಲಿಯವರೆಗೆ ಬಿಡುಗಡೆ ಮಾಡಲಾಗಿದೆ.

ಆ) ಕರ್ನಾಟಕ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಗೆ ನೀಡಬೇಕಾದ ಬಾಕಿಯಲ್ಲಿ ೧೧,೨೮,೩೧೫ ರೂಪಾಯಿಗಳನ್ನು, ನೀರಿನ ವೆಚ್ಚ, ಒಳಚರಂಡಿ ನಿರ್ವಹಣೆ, ಜೀವವಿಮಾ ನಿಗಮ ಮತ್ತು ಡಿಬೆಂಚರ್‌ಗಳ ಬಾಕಿಗೆ ಹೊಂದಾಣಿಕೆ ಮಾಡಲಾಗಿದೆ.

ನಂದಿಬೆಟ್ಟಕ್ಕೆ ಪ್ರತಿದಿನ ಪ್ರವಾಸ ಏರ್ಪಡಿಸುವುದು

೫೦೪ (೫೫೩) ಶ್ರೀ ಪಿ. ಸಿ. ಮುನಿಸ್ವಾಮಯ್ಯ (ದೇವನಹಳ್ಳಿ).—ಮಾನ್ಯ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ನಂದಿಬೆಟ್ಟವು ರಾಜ್ಯದ ಪ್ರೇಕ್ಷಣೀಯ ಸ್ಥಳಗಳಲ್ಲೊಂದಲ್ಲವೇ ?

ಆ) ಈ ಸ್ಥಳಕ್ಕೆ ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ ವತಿಯಿಂದ ಪ್ರತಿದಿನ ಪ್ರವಾಸವನ್ನು ಏರ್ಪಡಿಸಲಾಗುತ್ತಿದೆಯೇ ?

ಇ) ಇಲ್ಲದಿದ್ದರೆ, ಸರ್ಕಾರವು ನಂದಿಬೆಟ್ಟಕ್ಕೆ ಪ್ರತಿದಿನ ಪ್ರವಾಸವನ್ನು ಏರ್ಪಡಿಸಲು ಕ್ರಮ ಕೈಗೊಳ್ಳುವುದೇ ?

ಶ್ರೀ ಎಂ. ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು).—ಮುಖ್ಯಮಂತ್ರಿಗಳ ಪರವಾಗಿ ಉತ್ತರಿಸುವರು.

ಅ) ಹೌದು.

ಆ) ಇಲ್ಲ.

ಇ) ಸಾರ್ವಜನಿಕರಿಂದ ಈ ಬಗ್ಗೆ ಬೇಡಿಕೆ ಇದ್ದಲ್ಲಿ ಪ್ರತಿದಿನ ಪ್ರವಾಸವನ್ನು ಏರ್ಪಡಿಸಲಾಗುವುದು.

ಶ್ರೀ ಎಂ. ಎಸ್. ಕೃಷ್ಣನ್.—ಅಧ್ಯಕ್ಷರೇ, ಪ್ರಶ್ನೋತ್ತರ ವೇಳೆ ಮುಗಿದ ತಕ್ಷಣ ಅಡ್ಜರ್ನ್‌ಮೆಂಟ್ ಮೋಷನ್ ತೆಗೆದುಕೊಳ್ಳುತ್ತೇವೆಂದು ಹೇಳಿದ್ದೀರಿ.

(ಗೊಂದಲ)

ಉಪಾಧ್ಯಕ್ಷರು.—ಈಗ ಪರದಿಯನ್ನು ಒಪ್ಪಿಸುವಂಥಾದ್ದು ಇದೆ, ಅದು ಆಗಲಿ.

(ಅಧ್ಯಕ್ಷರು, ಪೀಠವನ್ನು ಅಲಂಕರಿಸಿದರು)

ಶ್ರೀ ಬಿ. ಲಕ್ಕಪ್ಪ. ಅಧ್ಯಕ್ಷರೆ, ನಾನು ೩೫೬ ಕೆಳಿಗೆ ಒಂದು ನೋಟೀಸ್ ಕಳುಹಿಸಿದ್ದೇನೆ.

(ಗೊಂದಲ)

ಅಧ್ಯಕ್ಷರು.—ದಯವಿಟ್ಟು ಮಾನ್ಯ ಸದಸ್ಯರೆಲ್ಲರೂ ಕುಳಿತುಕೊಳ್ಳಬೇಕು.